# ಅಧ್ಯಾಯ 39

ಓಂ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ



ಛಂದ :-ದೇಶ ದೇಶಗಳೊಳಗಿನಧಿಕಾರಿಗಳ ನಿತ್ಯದಿ
ಶೋಧಿಸಿ ಈಶನಾದ ಪ್ರಸಿದ್ಧ ಸದ್ಗುರುವವರ ಸ್ವಪ್ನದಿ
ಕಾಣಿಸಿ ಭಕ್ತಿ ಪ್ರೇಮವನುಚ್ಚಳಿಸಿ ಕರೆಸುವನು ತನ್ನಯ
ಪಾದಕೆ ಭಕ್ತ ಹೃತ್ತಾಪವನು ಕಳೆದನು ಅವರ ಹಿತ
ಸಾಧಿಸುವದಕೆ...

ಹೇ ಸಿದ್ಧಾರೂಢ ಸದ್ಗುರು ತಾಯಿಯೇ, ನೀನು ಸದಾ ಭಕ್ತ ಜನರ ಮೇಲೆ ಕೃಪೆಯ ಛಾಯೆಯನ್ನು ಹಾಕುವಿ. ಅವರ ದಶಯಿಂದಲೇ ನೀನು ಒಲಿದು ಸಗುಣ ರೂಪವನ್ನು ಧರಿಸಿಕೊಂಡು ಬಂದಿರುವಿ. ನೀನು ಭಕ್ತರಿಗೆ ಪ್ರೇಮವೆಂಬ ಸ್ತನವನ್ನು ಕುಡಿಸುವಿ, ಬ್ರಹ್ಮಾನಂದ ರಸವೆಂಬುದೇ ಇಲ್ಲಿ ದುಗ್ಧವಾಗಿರುವದು. ಅದನ್ನು ಸೇವಿಸುವುದರಿಂದ ವಿರಸದ ಸಂಸಾರವು ಮರೆತು ಹೋಗಿ ಬ್ರಹ್ಮಾನಂದದಲ್ಲಿ ಸಮರಸತ್ವ ಪ್ರಾಪ್ತವಾಗುವದು. ಈ ಸದ್ಗುರುನಾಥನು ದಯಾಳುವಾಗಿದ್ದು, ತನಗೆ ಶರಣು ಬಂದವರನ್ನು ಸ್ವೀಕಾರ ಮಾಡಿ, ಅವರ ಭವ ಬಂಧನಗಳನ್ನು ಕಡಿದು, ಅವರನ್ನು ಜ್ಞಾನಸ್ವರೂಪರನ್ನಾಗಿ ಮಾಡುವನು. ಲೋಹವು ಪುರುಷ ಕಲ್ಲಿಗೆ ಹತ್ತಿತು ಅಂದರೆ, ತಾನೇ ಸುವರ್ಣವಾಗುವದು. ಆದರೆ ಎರಡನೇ ಲೋಹದ ತುಂಡಿಗೆ ಸ್ಪರ್ಶಿಸಿ ಅದನ್ನು ಸುವರ್ಣ ಮಾಡಲಾರದು. ಸದ್ಗುರುನಾಥನು ಪರುಷದಂತೆ ಅಲ್ಲ, ಈತನು ಶಿಷ್ಯನನ್ನು ತನ್ನಂತೆ ಮಾಡಿಬಿಡುವನು. ಆ ಶಿಷ್ಯನಾದರೂ ಇತರರನ್ನು ಬ್ರಹ್ಮಸ್ವರೂಪ ಮಾಡುವನು. ಸದ್ಗುರುವಿಗೆ ಉಪಮಾ

ಕೊಡುವುದಕ್ಕೆ ಏನೂ ಇರುವದಿಲ್ಲ ಎಂದು ಆತನಿಗೆ ಅನುಪಮನೆನ್ನುವರು. ಆತನಿಗೆ ಶರಣು ಹೋಗುವದೆಂದರೆ ಆತನ ಪಾದಗಳನ್ನು ದೃಢವಾಗಿ ಹಿಡಿಯುವದಾಗಿರುತ್ತದೆ. ತಾಯಿಬಾಯಿ ದಾಭೋಳಕರ ಎಂಬಾಕೆಗೆ ಸದ್ಗುರುನಾಥ ಮೇಲೆ ದೃಢ ವಿಶ್ವಾಸವಿರುವದು. ಆಕೆಯು ಸಿದ್ಧ ಚಿಂತನೆಯಲ್ಲಿ ರಾತ್ರಿ ಹಗಲು ರಮಿಸುತ್ತಿರುವಳು. ಮುಂಬಯಿ ಶಹರಿನಲ್ಲಿ ವಾಸ ಮಾಡುತ್ತಿರುವಾಗ, ಒಂದಾನೊಂದು ದಿವಸ ಒಬ್ಬ ಸಾಧುವು ಮನೆಗೆ ಬಂದನು. ತಾಯಿಬಾಯಿಯು ಆಂತರ್ಯದೊಳಗೆ ಅತ್ಯಂತ ಸದ್ಭಾವವುಳ್ಳವಳಾಗಿ ಆ ಸಾಧುವಿಗೆ ಬಹಳ ಸತ್ಕಾರ ಮಾಡಿದಳು. ತನ್ನ ಮಕ್ಕಳನ್ನು ಮೊಮ್ಮಕ್ಕಳನ್ನೂ ಕರೆದು ಆತನ ಪಾದಕ್ಕೆ ಹಾಕಿದಳು. ಆಗ ಆ ಸಾಧುವು ಬಹಳ ಆನಂದಭರಿತನಾಗಿ ತಾಯಿಬಾಯಿಯನ್ನು ಕುರಿತು - "ಸಾಧುಗಳ ಮೇಲಿನ ನಿಮ್ಮ ಶ್ರದ್ಧಾ ನೋಡಿ ನಾನು ಮನಸ್ಸಿನಲ್ಲಿ ಅತ್ಯಂತ ಆನಂದ ಹೊಂದಿದೆನು, ಲೋಕದಲ್ಲಿ ನಿಮ್ಮಂಥಾ ಶ್ರೀಮಂತರಿಗೆ ಈ ಪ್ರಕಾರ ಭಕ್ತಿ ಇರುವುದು ಕ್ವಚಿತ್ತಾಗಿರುತ್ತದೆ. ಹಾಗಾದರೆ ನಿಮಗೆ ಒಂದು ಮಾತು

ಹೇಳುವೆನು ಕೇಳಿರಿ, ಹುಬ್ಬ ಳ್ಳಿಯಲ್ಲಿ ಸದ್ಗುರುಗಳಾದ ಸಿದ್ಧಾರೂಢರು, ಭಕ್ತಸಖರಾಗಿದ್ದು, ಈ ಭೂಮಿಯಲ್ಲಿ ಬಹು ಪ್ರಸಿದ್ಧರಾಗಿಯೂ ಅತ್ಯಂತ ಶ್ರೇಷ್ಠರಾಗಿಯೂ ಇರುವರು. ಅಸಂಖ್ಯ ಭಕ್ತ ಜನರು ಅವರೆಡೆಗೆ ಬಂದು, ಅವರ ಚರಣ ಸ್ಪ ರ್ಶದಿಂದ ಕೃತಕೃತ್ಯರಾಗಿ ಹೋಗುವರು. ಅವರ ಭಕ್ತರು ಏನೇನು ಮನೋರಥಗಳನ್ನು ಬಯಸುವರೋ ಅವುಗಳನ್ನು ಆತನ ಕೃಪೆಯಿಂದ ಕೂಡಲೇ ಹೊಂದುವರು. ಆತನ ರೂಪವು ಅತ್ಯಂತ ಮನೋಹರವಾಗಿದ್ದು ಇದು ಶಾಂತಿಯ ಸಾಗರವೋ ಎಂಬಂತೆ ಕಾಣಿಸುವದು, ಮುಖವನ್ನು ನೋಡಿದ ಮಾತ್ರದಿಂದ ತ್ರಿತಾಪಗಳೆಲ್ಲಾ ಆ ಕ್ಷಣವೇ ಪರಿಹಾರವಾಗುವವು. ಇದು ನೋಡಿರಿ. ಆತನ ಭಾವಚಿತ್ತವು.” ಎಂದು ಮನೋಹರವಾದ ಸಿದ್ಧರೂಪವನ್ನು ತೋರಿಸುವಂಥವನಾದನು. ಅದನ್ನು ನೋಡಿದ ಕೂಡಲೇ ತಾಯಿಬಾಯಿಗೆ ಮಹದಾನಂದವಾಗಿ, ಸಾಧುವನ್ನು ಕುರಿತು, -“ನೀವೇ ನಮಗೆ ಗುರು ರೂಪದಿಂದಿದ್ದು ನಿಜವಾದ ದೇವರನ್ನು ತೋರಿಸಿದಿರಿ. ಈಗ ನಮ್ಮ ಮೇಲೆ ಕೃಪಾ ಮಾಡಿ, ಆತನ ಕಡೆಗೆ ನಮ್ಮನ್ನು ಕರೆದುಕೊಂಡು

ಹೋಗಿರಿ," ಎಂದು ಹೇಳಿದ್ದಕ್ಕೆ ಆ ಸಾಧುವು - "ನೀವು ಹೊರಡುವ ಸಿದ್ಧತೆಯನ್ನು ಮಾಡಿರಿ ನಾನು ನಿಮ್ಮ ಕೂಡ ಬರುವೆನು, ಅಲ್ಲಿ ತನಕ ಇಲ್ಲೇ ಇರುವೆನು," ಎಂದು ಉತ್ತರ ಕೊಟ್ಟನು. ಆ ಸಾಧುವಿಗೆ ಬಹಳ ಉಪಚಾರಗಳಿಂದ ಪೂಜಿಸಿ, ಮರುದಿನ ಹೊರಡುವದೆಂದು ನಿರ್ಣಯಿಸಿದರು.

ತಾಯಿಬಾಯಿಗೆ ಸದ್ಗುರು ಧ್ಯಾನವು ಹತ್ತಿ, ಒಂದು ಚಮತ್ಕಾರವಾಯಿತು. ಅದನ್ನು ಹೇಳುವೆನು ಕೇಳಿರಿ, ಹುಬ್ಬಳ್ಳಿಯಲ್ಲಿರುವ ಸಿದ್ಧ ಸದ್ಗುರುವಿನ ಮೂರ್ತಿಯನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ ತಾಯಿಬಾಯಿಯು ಆ ರಾತ್ರಿ ಹಾಸಿಗೆ ಮೇಲೆ ಮಲಗಿಕೊಂಡಳು. ಆಗ ಸ್ವಪ್ನದಲ್ಲಿ ಆಕೆಯು ಪ್ರತ್ಯಕ್ಷ ಶ್ರೀ ಗುರುನಾಥನನ್ನು ಕಾಣುವಂಥವಳಾದಳು. ತನ್ನೆದುರಿಗೆ ಬರುವುದನ್ನು ನೋಡಿ, ಆತನ ಹಸ್ತವನ್ನು ಹಿಡಿದು,

ಒಂದು ಆಸನದ ಮೇಲೆ ಕೂಡ್ರಿಸಿದಳು. ಸದ್ಗುರುವಿನ ವಿಶೇಷವಾದ ತೇಜೋಭರಿತ ರೂಪವನ್ನು ನೋಡಿದ ಕೂಡಲೇ ಬಹಳ ಆನಂದವುಂಟಾಗಿ, ಹ್ಯಾಗೆ ಸದ್ಗುರು ರೂಪವನ್ನು ಆ ಸಾಧುವು ವರ್ಣಿಸಿದ್ದನೋ ಅದೇ ಪ್ರಕಾರ ಕಂಡಳು. ಆ ದಿವ್ಯ

ರೂಪವನ್ನು ತಾಯಿಯು ನೋಡಿ, ತತ್ಕಾಲ ಆತನ ಪಾದಕ್ಕೆ ಬಿದ್ದಳು. ಆತನು ಆಕೆಯನ್ನು ಪ್ರೇಮದಿಂದ ಎಬ್ಬಿಸಿದನು. ಆಮೇಲೆ ತಾಯಿಬಾಯಿಯು ಪೂಜಾ ಸಾಮಗ್ರಿಗಳನ್ನು ತಂದು, ಬಹು ಪ್ರೇಮದಿಂದ ಸದ್ಗುರು ಪೂಜಾ ಮಾಡಿ - "ನನ್ನ ಮೇಲೆ ಕೃಪೆ ಮಾಡಿ, ಇದೇ ಪ್ರಕಾರ ನಿತ್ಯದಲ್ಲಿಯೂ ದರ್ಶನ ಕೊಡುತ್ತಿರಬೇಕು. ಇದೇ ವರದಾನ ನನಗೆ ಕೊಡಬೇಕೆಂಬುವದೇ ನನ್ನ ಪ್ರಾರ್ಥನೆ ಇರುತ್ತದೆ. ಇದರ ಹೊರತು ಬೇರೆ ಏನೇನು ಬೇಡುವುದಿಲ್ಲ" ಎಂದು ಹೇಳಿದ್ದು ಕೇಳಿ - ಸದ್ಗುರುವು "ತಥಾಸ್ತು" ಎಂದು ಹೇಳಿ ಅಂತರ್ಧಾನ ಹೊಂದಿದನು. ಈ ಪ್ರಕಾರ ಸ್ವಪ್ನ ನೋಡಿ, ತಾಯಿಬಾಯಿಯು ಅತ್ಯಂತ ಆನಂದಭರಿತಳಾದಳು. ಪ್ರಾತಃಕಾಲದಲ್ಲಿ ಎಚ್ಚರವಾದ ಕೂಡಲೆ, ಎಲ್ಲರನ್ನೂ ಕರೆದು ತನ್ನ ಸ್ವಪ್ನ ವೃತ್ತಾಂತವನ್ನು ಹೇಳಿ " ಸದ್ಗುರುನಾಥನ ಮಹಿಮಾ ಏನು ನೋಡಿರಿ, ಅದು ವರ್ಣನಾತೀತವಾಗಿರುವದು," ಎಂದು ಬಹು ಪ್ರೇಮದಿಂದ ಅಂದಳು. ಹೃದಯದಲ್ಲಿ ಅತ್ಯಂತ ಸದ್ಗುರು ಭಕ್ತಿಯು ಪೂರ್ಣವಾಗಿ, ಕ್ಷಣಕ್ಷಣಕ್ಕೆ ಸಿದ್ಧಮೂರ್ತಿಯು

ಧ್ಯಾನದಲ್ಲಿ ಹೊಳೆಯುತ್ತಿದ್ದು, ಚಿತ್ತಕ್ಕೆ ಆನಂದವನ್ನುಂಟು ಮಾಡುತ್ತಿತ್ತು. ಎಲ್ಲರೂ ದರ್ಶನಕ್ಕೋಸ್ಕರ ಆತುರ ಪಡುತ್ತಿದ್ದರು. ಅದೇ ದಿವಸ ಗಾಡಿಯೊಳಗೆ ಕುಳಿತು ಸದ್ಗುರು ದರ್ಶನೋತ್ಸುಕರಾಗಿ, ಪ್ರೇಮದಿಂದ ಆತನನ್ನು ಸ್ಮರಿಸುತ್ತ ಮರುದಿವಸ ಹುಬ್ಬಳ್ಳಿಗೆ ಬಂದು ಇಳಿದರು. ಹಿಂದಿನ ಅಧ್ಯಾಯದಲ್ಲಿ ಹೇಳಿತ್ತೇನಂದರೆ - ತುಕ್ಕಪ್ಪನ ಗೃಹದಲ್ಲಿ ಸಿದ್ಧರನ್ನು ಮಂಟಪದಲ್ಲಿ ಕೂಡ್ರಿಸಿ, ಅವರ ಮುಂದೆ ಕೀರ್ತನ ನಡೆಯುತ್ತಿತ್ತು. ಇಲ್ಲಿಗೆ ಬಂದು ತಾಯಿಬಾಯಿಯು ಇಳಿದಳು. ಮಂಟಪದಲ್ಲಿ ಆ ದಿವ್ಯ ಮೂರ್ತಿಯನ್ನು ನೋಡಿ, ತಾಯಿಗೆ ಮನಸ್ಸಿನಲ್ಲಿ ಹಿಡಿಸಲಾರದಂಥಾ ಆನಂದವಾಯಿತು. ಆಕೆಯು ಧಾವಿಸಿ ಆತನ ಚರಣಗಳ ಮೇಲೆ ಬಿದ್ದು, ಅವನ್ನು ಘಟ್ಟಿಯಾಗಿ ಹಿಡಿದಳು, ಕಣ್ಣೊಳಗಿಂದ ಆನಂದಾಶ್ರುಪಾತವಾಗುತ್ತಿದ್ದು, ಅದ್ಭುತವಾದ ಪ್ರೇಮ ಉಳ್ಳವಳಾಗಿ, ಸದ್ಗುರು ಮುಖವನ್ನು ನೋಡುತ್ತ ನೋಡುತ್ತ, ಎಷ್ಟು ನೋಡಿದರೂ ಸಾಕು ಅನಿಸಲಿಲ್ಲ. ಆಗ ಸಿದ್ಧರು - 'ಇವತ್ತು ಯಾವಲ್ಲಿಂದ ಆಗಮನವಾಯಿತು ?" ಎಂದು ಕೇಳಿದ್ದಕ್ಕೆ ತಾಯಿಬಾಯಿಯು - "ನಾವು

ಮುಂಬೈಪೂರಿನೊಳಗಿರುವವರು, ನಿಮ್ಮ ದರ್ಶನೆದ್ದೆಶೆಯಿಂದ ಬಂದಿರುವೆವು. ಸ್ವಪ್ನದಲ್ಲಿ ಬಂದು ನೀವು ದರ್ಶನವನ್ನು ಕೊಟ್ಟಿರಿ. ಆಗ ನಿಮ್ಮ ಪ್ರತ್ಯಕ್ಷ ದರ್ಶನಕ್ಕೊಸ್ಕರ ಮನಸ್ಸು ಬಹಳ ಉತ್ಕಂಠಿತವಾಗಿ, ತತ್ಕಾಲ ಹೊರಟುಬಂದೆವು," ಎಂದು ನಮ್ರ ಭಾವದಿಂದ ಉತ್ತರ ಕೊಟ್ಟಳು. ಆಮೇಲೆ ಸದ್ಗುರುಗಳ ಪೂಜೆಯನ್ನು ನೋಡಿ, ತಾಯಿಬಾಯಿಯು ಬಹಳ ಆನಂದಪಟ್ಟು - "ಆಹಾ ಸದ್ಗುರುವಿನ ಕೃಪೆಯು ಎಷ್ಟಂತ ವರ್ಣಿಸಲಿ, ಇಂಥಾ ಪೂಜಾ ಕಾಲದಲ್ಲಿಯೇ ನಮ್ಮನ್ನು ಕರೆಸಿಕೊಂಡನು' ಎಂದು ಗದ್ಗದಿತಳಾದಳು. ಭೋಜನವಾದ ಬಳಿಕ, ತಾಯಿ ಮತ್ತು ಆಕೆಯ ಮಂದಿಯನ್ನು ಕೂಡಿಕೊಂಡು ಸದ್ಗುರುಗಳ ಮಠಕ್ಕೆ ಹೋಗುವಂಥವರಾದರು.

ಸಿದ್ಧಾಶ್ರಮದಲ್ಲಿ ಕೆಲವು ದಿನ ಆನಂದದಿಂದ ವಾಸಿಸಿ, ಸದ್ಗುರು ಆಜ್ಞೆಯನ್ನು ತೆಗೆದುಕೊಂಡು, ತಾಯಿಬಾಯಿ ತನ್ನ ಮಂಡಳಿ ಸಮೇತ ತಮ್ಮೂರಿಗೆ ಹೋದಳು. ಅಂದಿನಿಂದ ಪ್ರತಿ ಒಂದು ಉತ್ಸವಕ್ಕೆ ತಾಯಿಬಾಯಿಯು ತನ್ನ ಮಕ್ಕಳು ಮರಿ ಎಲ್ಲರನ್ನೂ ಕರೆದುಕೊಂಡು ಮುಂಬಯಿಯಿಂದ ಹುಬ್ಬಳ್ಳಿಗೆ ಬರುತ್ತಿದ್ದಳು

ಮತ್ತು ಅವರನ್ನೆಲ್ಲಾ ಸದ್ಗುರು ಪಾದಕ್ಕೆ ಹಾಕಿ ಕೃತಕೃತ್ಯತೆಯನ್ನು ಹೊಂದುತ್ತಿದ್ದಳು. ತಾಯಿಬಾಯಿಗೆ ಮೂರು ಮಂದಿ ಗಂಡುಮಕ್ಕಳು. ಅವರ ಪೈಕಿ ಎರಡನೇಯವನಾದ ಪ್ರಭಾಕರನೆಂಬವನಿಗೆ ನಲಿನಿಯಂಬ ಪುತ್ರಿಯು ಇರುವಳು. ಒಮ್ಮೆ ಎಲ್ಲ ಮನೆ ಮಂದಿಯನ್ನು ಕೂಡಿಕೊಂಡು, ತಾಯಿಬಾಯಿಯು ಹುಬ್ಬಳ್ಳಿಗೆ ಬಂದು ಸಿದ್ಧಾಶ್ರಮದಲ್ಲಿ ಉತ್ಸವದ್ದಶೆಯಿಂದ ಇರುತ್ತಿರುವಾಗ, ಏಳುವರ್ಷ ವಯಸ್ಸಿನ ನಳಿನಿಗೆ ವಿಪರೀತವಾದ ಜ್ವರವೂ ಪೀಡಿಸಲಾರಂಭಿಸಿತು. ಮೂರು ದಿವಸಗಳವರೆಗೆ ಜ್ವರವು ಹೆಚ್ಚುತ್ತ ಹೊಗಿ, ಮೂರನೇ ದಿವಸ ರಾತ್ರಿ ಹೊತ್ತಿಗೆ ಹುಡುಗಿಗೆ ಪ್ರಾಣಾಂತವಾಗುತ್ತದೋ ಎಂಬಂತೆ ಕಂಡು ಬಂತು. ಔಷಧೋಪಾಯವು ಏನೇನೂ ಮಾಡಬಾರದೆಂದು ತಾಯಿಬಾಯಿಯ ಆಜ್ಞೆಯಾದ್ದರಿಂದ, ಸದ್ಗುರುಗಳ ಪಾದ ತೀರ್ಥದ ವಿನಹಾ ಎರಡನೇದೇನೂ ನಲಿನಿಗೆ ಕೊಡುತ್ತಿದ್ದಿಲ್ಲ. ಈ ಸಮಯದಲ್ಲಿ ಸಿದ್ಧರು ಮಲಗಿ ನಿದ್ರಿಸುತ್ತಿದ್ದರು. ಆಗ ನಳಿನಿಯ ತಾಯಿಯು, ಅಳುತ್ತ, - 'ಹೇ ಸದ್ಗುರು ಮಾತೆಯೇ, ಹುಡುಗಿಯ ಪ್ರಾಣಾಂತಕಾಲ ಬಂತಲ್ಲ,

ಏನು ಮಾಡಲಿ, ನಿನ್ನನ್ನು ಹ್ಯಾಗೆ ಎಬ್ಬಿಸಲಿ, ನೀನು ಸರ್ವಾಂತರದಲ್ಲಿ ವ್ಯಾಪಿಸಿರುತ್ತಿ; ಕಾಲದಲ್ಲಿ ಬೇಗನೆ ಬಂದು ಈ ಹುಡುಗಿಯನ್ನು ಎಬ್ಬಿಸುವವನಾಗು," ಎಂದು ಪ್ರಾರ್ಥಿಸುತ್ತಿರುವಾಗ ತಾಯಿಬಾಯಿಯು, - "ಸದ್ಗುರುರಾಯನೇ, ಸರ್ವರನ್ನು ನಿನ್ನ ಪಾದದ ಮೇಲೆ ಹಾಕಿರುತ್ತೇನೆ, ನಿನ್ನ ಬಿರುದು ವ್ಯರ್ಥವಾಗಿ ಹೋದೀತು. ಇದರ ಮೇಲೆ, ನೀನು ಏನು ಮಾಡತಕ್ಕದ್ದು ಅದನ್ನೇ ಮಾಡು" ಎಂದು ದೀನವಾಣಿಯಿಂದ ಅನ್ನುತ್ತಿದ್ದಳು. ಇತ್ತ ಸದ್ಗುರುಗಳು ನಿದ್ರೆಯೊಳಗಿಂದ ಎಚ್ಚತ್ತು ಬಹಳ ಗಡಿಬಿಡಿಯಿಂದ ಪಾದಗಳಿಗೆ ಜೋಡುಗಳನ್ನು ಹಾಕಿಕೊಂಡು ಮುಂಬಯಿಯವರು ಇಳಿದ ಸ್ಥಾನಕ್ಕೆ ಪ್ರಾಪ್ತರಾದರು. ಅವರು ಬರುವದನ್ನು ತಾಯಿಬಾಯಿಯು ನೋಡಿ, ತತ್ಕಾಲವೇ ಸಾಷ್ಟಾಂಗ ನಮನವನ್ನು ಮಾಡಿ, "ಹೇ ದಯಾಳುವಾದ ಸದ್ಗುರುನಾಥನೇ, ನಿನಗೆ ಈ ಸಮಯದಲ್ಲಿ ಯಾರು ಎಬ್ಬಿಸಿರಬಹುದು ?" ಎಂದು ಅಂದದ್ದು ಕೇಳಿ, ಸಿದ್ಧರು - "ನಿಮ್ಮ ಆರ್ತಸ್ವರವು ಕಿವಿಯಲ್ಲಿ ಬಿದ್ದ ಕೂಡಲೇ ನಾನು ಶೀಘ್ರವಾಗಿ

ಬಂದೆನು. ನಲಿನಿಯು ಎಲ್ಲಿರುವಳು, ಬೇಗನೇ ನನಗೆ ತೋರಿಸು," ಎಂದು ನುಡಿದರು. ಸಿದ್ಧರಿಗೆ ಕೈಹಿಡಿದು, ತಾಯಿಬಾಯಿಯು ನಲಿನಿಯು ಮಲಗಿದ್ದಲ್ಲಿ ಕರೆದುಕೊಂಡು ಬಂದಳು. ಆ ಹುಡುಗಿಯನ್ನು ಸದ್ಗುರುಗಳು ಕೃಪಾದೃಷ್ಟಿಯಿಂದ ನೋಡಿ, -"ನೀವು ಸ್ವಸ್ಥ ಚಿತ್ತದಿಂದಿರ್ರಿ . ಈಗಲೇ ನಳಿನಿಯು ನೆಟ್ಟಗಾಗುವಳು," ಎಂದು ಅನ್ನುವಾಗ, ತಾಯಿಯು ಆಕೆಯನ್ನು ಸಿದ್ಧರ ಪಾದದ ಮೇಲೆ ಹಾಕಿದಳು. ಅನಂತರ ಸದ್ಗುರುಗಳು ಶಯನಕ್ಕೆ ತೆರಳಿದರು. ತಾಯಿಬಾಯಿಗೆ ಈಗ ಧೈರ್ಯಬಂತು. ಅಷ್ಟರಲ್ಲಿ ನಳಿನಿಯು ಎದ್ದು ಕೂತಿದ್ದು ನೋಡಿ, ತಾಯಿಗೆ ಬಹಳ ಆನಂದವಾಯಿತು. ಇಂಥಾ ಸದ್ಗುರು ಮಹಾರಾಜರು ಭಕ್ತ ಕಾರ್ಯ ಮಾಡುವದಕ್ಕೆ ಯಾವಾಗಲೂ ಜಾಗೃತರಾಗಿರುತ್ತಿರುವರು. ಭಕ್ತರ ಸುಖವೇ ಅವರು ಸುಖವು, ಭೇದ ಭಾವವೇ ಅವರಿಗಿರುವದಿಲ್ಲ. ಈಗ ಕಥೆ ಲಕ್ಷ್ಯಾರ್ಥವನ್ನು ಶ್ರವಣ ಮಾಡಿರಿ, ತಾಯಿಬಾಯಿಯೇ ಭಕ್ತಿ, ಆಕೆಗೆ ದೈವಯೋಗದಿಂದ ಭೇಟಿಯಾದ ಸಾಧುವೇ ಸದ್ಗುರು, ಆ ಸದ್ಗುರುವಿಗೆ ಸದ್ಭಾವದಿಂದ ಶರಣು ಹೋಗುವದರಿಂದ,

ಆತನು ಸಿದ್ಧ ಸ್ವರೂಪವನ್ನು ಆ ಭಕ್ತಿಗೆ ಬೋಧಿಸಿದನು. ಆಕೆಯು ಸ್ವಪ್ನವೆಂಬ ತುರೀಯಾವಸ್ಥೆಯೊಳಗೆ ಸಿದ್ಧ ಸ್ವರೂಪವನ್ನು ಕಂಡಳು. ಆಗ ಕಿಂಚಿನ್ಮಾತ್ರ ಸ್ವರೂಪವನ್ನು ಕಂಡದ್ದರಿಂದ, ಅದು ನಿತ್ಯದಲ್ಲಿಯೂ ನಿಕಟವಾಗಿರಬೇಕೆಂಬ ಉತ್ಕಂಠಿತ ಮನಸ್ಸಿನಿಂದ ಸದ್ಗುರುವನ್ನು ಪ್ರಾರ್ಥಿಸಿದಳು, ಆಗ ಸದ್ಗುರುವು ಭಕ್ತಿಯನ್ನು ನಿಶ್ಚಲ ಮನವೆಂಬ ಗಾಡಿಯಲ್ಲಿ ಕೂಡ್ರಿಸಿಕೊಂಡು, ಶೀಘ್ರವಾಗಿ ಆತ್ಮಾಕಾರ ವೃತ್ತಿ ಎಂಬ ಹುಬ್ಬ ಳ್ಳಿಗೆ ಮುಟ್ಟಿಸಿದನು, ಆತ್ಮಾಕಾರ ವೃತ್ತಿಯೊಳಗೆ ಸ್ವಪ್ರಕಾಶನಾದ ಆತ್ಮನು ಸಹಜವಾಗಿ ಪ್ರಕಟನಾಗುತ್ತಾನೆ. ಆತನು ಭಕ್ತಿಯನ್ನು ನಿಜಾನಂದ ರೂಪ ರಾಜ್ಯದಲ್ಲಿ ಒಯ್ದು ಕೂಡ್ರಿಸುವನು. ಇಂಥಾ ಸದ್ಗುರು ರಾಜನನ್ನು ಜೀವಪ್ರಾಣ ಮಾಡಿ ಧ್ಯಾನಿಸುತ್ತಿದ್ದರೆ, ಅಂತರವಾಸಿಯಾಗಿರುವ ಆತನು ಪ್ರಗಟನಾಗಿ ಮುಮುಕ್ಷುವಿಗೆ ಜ್ಞಾನವನ್ನು ಕೊಡುವನು. ಈಗ ಎರಡನೇ ಕಥೆಯ ಲಕ್ಷ್ಯಾರ್ಥವೆಂದರೆ - ನಲಿನಿಯಂಬ ಶಮೆಗೆ ಬಂದ ಜ್ವರವೇ ವಿಷಯಾಸಕ್ತಿಯು ಅದರಿಂದ ಶಮೆಗೆ ಪ್ರಾಣಾಂತವಾಯಿತು. ಆಗ ಸದ್ಗುರು ದೇವರು ಧಾವಿಸಿ ಬಂದು, ಕೃಪಾ ದೃಷ್ಟಿಯ

ಅಮೃತ ವರ್ಷಿಸಿ, ಅದರಿಂದ ವಿಷಯಾಸಕ್ತಿಯನ್ನು ನಾಶಿಸಿ, ಸ್ವರೂಪದಲ್ಲಿ ಪ್ರಬೋಧ ಮಾಡಿಸಿದನು. ದಯಾಘನನಾದ ಸಿದ್ಧ ಸದ್ಗುರುವಿಗೆ ನಮನ ಮಾಡಿದ ಮಾತ್ರದಿಂದ ಸರ್ವ ದುಃಖಗಳು ಹರಣವಾಗುವವು, ಮತ್ತು ಆತ್ಮಾನಂದವು ಪ್ರಕಟವಾಗಿ ಭವಭಯವು ಪೂರ್ಣವಾಗಿ ನಿರಸನವಾಗುವದು. ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಅತಿ ಮಧುರವಾದ ಈ ಮೂವತ್ತೊಂಭತ್ತನೇ ಅಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸುವನು.